ಸುಲಿಗೆ, ದರೋಡೆ ಮುಂತಾದ ಹಿಂಸಾಚಾರಕ್ಕೆ ದಾರಿಯಾಗುತ್ತದೆ; ಸುಳ್ಳು ಮೋಸ ವಂಚನೆಗಳತ್ತ ಸೆಳೆದೊಯ್ಯುತ್ತಿದೆ; ಪ್ರಕೃತಿ ಸಂಪತ್ತನ್ನು ಕೊಳ್ಳೆ ಹೊಡೆಯಲು ನಾಂದಿಯಾಗುತ್ತದೆ; ಮಾನವೀಯ ಮೌಲ್ಯಗಳು ಮರೆಯಾಗಿ ರಾಕ್ಷಸೀ ಮೌಲ್ಯಗಳಿಗೆ ಮಣೆ ಹಾಕುತ್ತಿದೆ. ಬೀದರ್ ಜಿಲ್ಲೆಯ ಔರಾದ್‌ನಲ್ಲಿ ಗರ್ಭಿಣಿಯೊಬ್ಬಳು ಮೊನ್ನೆ ಮೊನ್ನೆ ಹೆರಿಗೆಯ ನೋವಿನಿಂದ ಸರ್ಕಾರಿ ಆಸ್ಪತ್ರೆಯ ಬಾಗಿಲು ತಟ್ಟಿದಳು. 'ಹೆರಿಗೆಯ ಸೌಕರ್ಯಗಳು ನಮ್ಮಲ್ಲಿಲ್ಲ' ಎಂದು ಸಿಬ್ಬಂದಿ ನಿರ್ದಯವಾಗಿ ಆ ಬಡವೆಯನ್ನು ಹೊರಗಟ್ಟಿತು. ಆಸ್ಪತ್ರೆಯ ಎದುರಿನ ಬೀದಿಯಲ್ಲೇ ಆಕೆ ಹೆರಬೇಕಾಯಿತು. ಆ ದಾರಿಯಲ್ಲಿ ಹೋಗುತ್ತಿದ್ದ ಸ್ತ್ರೀಯರು ಆಕೆಯ ಸೀರೆಯನ್ನು ತೆರೆಯಾಗಿ, ಮರೆಯಾಗಿ ಹಿಡಿದುಕೊಂಡು ನಿಂತರು. ಇದಕ್ಕಿಂತ ಕರುಣಾಜನಕ ಸನ್ನಿವೇಶವಿರುವುದು ಸಾಧ್ಯವೇ! ರಕ್ಷಣೆ ನೀಡಬೇಕಾದ ತಾಣಗಳೇ ಕಟುಕರ ಮನೆಯಾದರೆ, ಕಾಪಾಡಬೇಕಾದವರೇ ಕೈಚೆಲ್ಲಿ ಕುಳಿತರೆ, ಎಲ್ಲವೂ ರಾಕ್ಷಸೀಕರಣವಾಗಿ ಬಿಡುತ್ತದೆ.

ಪಾಲ್ಕುರಿಕೆಯ ಸೋಮನಾಥವಾಣಿ

"ಬೆಳೆಯಾಗಲೆಂದು ಬಿತ್ತಿರುವ ಬೀಜಗಳನ್ನು ಭೂಮಿಯೇ ನುಂಗಿದರೆ, ರಕ್ಷಣೆಗೆಂದು ಕಟ್ಟಿದ ಬೇಲಿಯೇ ಎದ್ದು ಹೊಲವನ್ನು ಮೇದರೆ, ಕಾಪಾಡಬೇಕಾದ ಗಂಡನೇ ತನ್ನ ಹೆಂಡತಿಯನ್ನು ಕ್ರೂರವಾಗಿ ಹಿಂಸಿಸಿದರೆ, ರಕ್ಷಕನಾದ ದೊರೆಯೇ ಪ್ರಜೆಗಳನ್ನು ಬಾಧಿಸತೊಡಗಿದರೆ, ಮರಗಳೇ ತಮ್ಮ ಹಣ್ಣುಗಳನ್ನು ನುಂಗಿ ಕೊಂಡರೆ, ಹೆತ್ತ ತಾಯಿಯೇ ತನ್ನ ಮಗುವಿಗೆ ವಿಷವನ್ನು ಕುಡಿಸಿದರೆ, ಕಾಪಾಡುವ ಶಿವನೇ ಕೊಲ್ಲುವವನಾದರೇ ನಮಗೆ ಶತ್ರುವಾದವನು ನಮ್ಮನ್ನು ಕಾಯುತ್ತಾನೆಯೆ" ಎಂದು ಪ್ರಶ್ನಿಸಿರುವ ಪಾಲ್ಕುರಿಕೆಯ ಸೋಮನಾಥ ಕವಿಯ ಮಾತು ಈ ಸಂದರ್ಭಕ್ಕೆ ಚೆನ್ನಾಗಿ ಹೊಂದುವಂತಿದೆ:

ಧರೆ ಬೀಜಂಗಳ ನುಂಗೆ, ಬೇಲಿ ಹೊಲನೆಲ್ಲಂ ಮೇದೊಡಂ, ಗಂಡ
ಹೆಂಡಿರನತ್ಯುಗ್ರದಿ ಶಿಕ್ಷಿಸಲ್, ಪ್ರಜೆಗಳಂ ಭೂಪಾಲಕಂ ಬಾಧಿಸಲ್ ।
ತರುವೇ ಪಣ್ಗಳ ಮೆಲ್ಲೆ, ಮಾತೆ ವಿಷಮಂ ಪೆತ್ತರ್ಭಕಂಗೂಡಿಸಲ್
ಹರಕೊಲ್ಲಲ್ ಪರಕಾಯ್ವನೇ ಹರಹರಾ ಶ್ರೀ ಚನ್ನಸೋಮೇಶ್ವರಾ ॥

ಭ್ರಷ್ಟಾಚಾರದ ವೃದ್ಧಿಗೆ ಕಾರಣಗಳು

ಜ್ಯೇಷ್ಠವರ್ಮನ್ ಎಂಬ ಲೇಖಕರು, ' ಭ್ರಷ್ಟಾಚಾರದ ವೃದ್ಧಿಗೆ ಕಾರಣಗಳು' ಎಂಬ ಲೇಖನವೊಂದರಲ್ಲಿ (*'ಅಸೀಮಾ'*, ಮೇಷ ಸಂಕ್ರಮಣ, ಏಪ್ರಿಲ್ ೨೦೦೩, ಪುಟ ೧೦೨–೧೦೫) ಮಂಡಿಸಿರುವ ವಿಚಾರಗಳ ಸಾರವನ್ನಿಲ್ಲಿ ಬರೆಯುತ್ತಿದ್ದೇನೆ: ೧. ಸೆಕ್ಯುಲರಿಸಂ ಎಂಬ ಹೆಸರಿನಲ್ಲಿ ನಾಸ್ತಿಕತೆ ಹಬ್ಬುತ್ತಿದೆ; ನೈತಿಕ ಮೌಲ್ಯಗಳು ಕುಸಿಯುತ್ತಿವೆ; ಅದು ಭ್ರಷ್ಟಾಚಾರಕ್ಕೂ ರಾಜಕೀಯದ ಅಪರಾಧೀಕರಣಕ್ಕೂ ಕಾರಣವಾಗಿದೆ. ೨. ಭ್ರಷ್ಟಾಚಾರದಿಂದ ಲಾಭಪಡೆಯುವ ಸಂಬಳ ಗಾರ ವರ್ಗವು ಲಂಚಪಡೆಯುವುದು, ಲಂಚಕೊಡುವುದು, ತೆರಿಗೆ ಗಳ್ಳತನ ಮಾಡುವುದು, ಕಳ್ಳಸಂತೆ ವ್ಯಾಪಾರ ಮುಂತಾದ ಕಿಡಿಗೇಡಿ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ೩. ದೇಶದ ಒಟ್ಟು ಜನಸಂಖ್ಯೆಯ ಶೇ. ೫ರಷ್ಟು ಜನರಿಗೆ ಮಾತ್ರ ಮೇಜಿನಡಿಯಿಂದ ಸಂಪಾದಿಸುವ ಸುಲಭ ಅವಕಾಶವಿದ್ದು, ಮಿಕ್ಕ ಶೇ.೯೫ ಜನರು, ಅನ್ಯಮಾರ್ಗವಿಲ್ಲದೆ ಅವರಿಗೆ ತಲೆಬಾಗುವಂತಾಗಿದೆ. ಜನಾಭಿಪ್ರಾಯವು ಭ್ರಷ್ಟಾಚಾರದ ವಿರುದ್ಧವಾಗಿದ್ದರೂ, 'ಬೆಕ್ಕಿನ ಕತ್ತಿಗೆ ಗಂಟೆ ಕಟ್ಟುವವರಾರು' ಎಂಬ ಗಾದೆಯಂತೆ ಅವರ ಹೋರಾಟವು ಸೂಕ್ತ ನಾಯಕತ್ವವಿಲ್ಲದೆ ಸೊರಗುತ್ತಿದೆ. ೪. ಸರ್ಕಾರಿ ಉದ್ಯೋಗಸ್ಥರ ವರ್ಗಾವಣೆ, ಪದೋನ್ನತಿ, ಪೊಲೀಸ್ ಬಲವನ್ನು ದ್ವೇಷಸಾಧನೆಗೆ ಬಳಸಿಕೊಳ್ಳುವುದು ಮುಂತಾದ ರಾಜಕಾರಣದ ಹಸ್ತಕ್ಷೇಪಗಳಿಂದಾಗಿ ಕಾರ್ಯದಕ್ಷತೆ ಮತ್ತು ಕಾರ್ಯಕ್ಷಮತೆಗಳು ಕುಸಿಯುತ್ತಿವೆ. ೫. ಕಾನೂನುಗಳನ್ನೂ, ನಿಮಾವಳಿಗಳನ್ನೂ ತಮಗೆ ಬೇಕಾದಂತೆ ವ್ಯಾಖ್ಯಾನಿಸುವ ಸೌಕರ್ಯವು ಆ ಕಾನೂನು ಜಾಲದೊಳಗೇ ಇದ್ದು, ಅಪರಾಧಿಗಳ ಜೀವನವೇ ಸ್ವರ್ಗವಾಗಿ, ಸಜ್ಜನರ ಜೀವನವೇ ನರಕವಾಗಿ ಪರಿಣಮಿಸುತ್ತಿದೆ. 'ವೈಟ್‌ಕಾಲರ್ ಕ್ರಿಮಿನಲ್' ಗಳು ದಿನೇದಿನೇ ಹೆಚ್ಚುತ್ತಿದ್ದಾರೆ. ೬. ಕೇವಲ ಆರ್ಥಿಕ ಪ್ರಗತಿ ಮತ್ತು ಜನರಿಗೆ ಭೌತಿಕ ಸುಖಸೌಲಭ್ಯಗಳನ್ನು ಒದಗಿಸುವುದೇ ಸರ್ಕಾರದ ಹೊಣೆಗಾರಿಕೆ ಎಂದು ರಾಜಕಾರಿಣಿಗಳು ಭಾವಿಸಿದಂತಿದೆ. ೭. ರಾಜಕಾರಣವು ಸ್ವರ್ಗಸುಖವನ್ನು ಅನುಭವಿಸಲು ತಕ್ಕ ಮಾರ್ಗ ವೆಂಬಂತೆ ಆಗಿರುವುದರಿಂದ ತ್ಯಾಗಶೀಲ ನಾಯಕರ ಅಭಾವ ಎದ್ದುಕಾಣುತ್ತಿದೆ. ೮. ಸಾರ್ವಜನಿಕರಲ್ಲಿ ಪೌರಪ್ರಜ್ಞೆಯ ಕೊರತೆಯು ಭ್ರಷ್ಟಾಚಾರದ ಉಲ್ಬಣಿಕೆಗೆ ಕಾರಣವಾಗಿದೆ. "ಅಪರಾಧಗಳನ್ನು ತಡೆಯುವುದು ಪೊಲೀಸರ ಕೆಲಸ; ಅದರಲ್ಲಿ ನಮ್ಮ ಪಾತ್ರವೇನೂ ಇಲ್ಲ" ಎಂದು ಅವರು ಭಾವಿಸಿರುವಂತಿದೆ. ೯. ಪತ್ರಿಕೋದ್ಯಮ, ಪ್ರಸಾರ ಮಾಧ್ಯಮಗಳು ಭ್ರಷ್ಟಾಚಾರವನ್ನು ತೊಡೆಯುವಲ್ಲಿ ದಿಟ್ಟಹೆಜ್ಜೆ ಇಡಲಾರದೆ ಮೂಕವೇದನೆಯನ್ನು ಅನುಭವಿಸುತ್ತಿವೆ.

ಕಾಟಾಚಾರವನ್ನು ಇದರೊಂದಿಗೆ ಜೋಡಿಸಿಕೊಳ್ಳಬೇಕು

ಭ್ರಷ್ಟಾಚಾರ, ಹಿಂಸಾಚಾರಗಳ ಸಾಲಿಗೆ ಕಾಟಾಚಾರವನ್ನೂ ಜೋಡಿಸಿಕೊಳ್ಳಬೇಕು. ಮಾಡುವ ಕರ್ತವ್ಯದಲ್ಲಿ ಶ್ರದ್ಧೆಯಿಲ್ಲದೆ, "ಅಯ್ಯೋ, ಮಾಡಬೇಕಲ್ಲ" ಎಂದು ತೋರುಗಾಣಿಕೆಗೆ ಮಾಡುವ ಕಾರ್ಯಕ್ಕೆ ಕಾಟಾಚಾರ ಎಂದು ಹೆಸರು. ಕಾಟಾಚಾರಿಗಳಿಗೆ ಕೆಲಸಮಾಡುವುದೇ ಒಂದು ಕಾಟ. "ನಾನು ಮಾಡುವ ಕೆಲಸ ಭಗವಂತನಿಗೆ ಪ್ರಿಯವಾಗಲಿ" ಎಂಬ ಈಶ್ವರಾರ್ಪಣ ಬುದ್ಧಿ ಅವರಿಗೆ ಇರುವುದಿಲ್ಲ. ಅವರಿಗೆ ಅದೊಂದು ಹೊರೆ. ಸದ್ಯ ಮಾಡಿ ಮುಗಿಸಿದರೆ ಸಾಕು ಎಂಬ ಜುಗುಪ್ಸೆ. ಆ ಕೆಲಸಕ್ಕೆ ಮೀರಿದ ಪ್ರತಿಫಲ ಕೈಗೆ ಬರುತ್ತಿದ್ದರೂ ಅವರಿಗೆ ತೃಪ್ತಿಯಿಲ್ಲ. "ಅಯ್ಯೋ, ಯಾರು ಮಾಡುತ್ತಾರೆ, ಬಿಡು" ಎಂಬ ಅನಾದರ. ಅಂಥವರ ಪಾಲಿಗೆ ಅದೊಂದು 'ಖರ್ಮ'. ಕೆಲಸಗೇಡು. 'ಸರ್ಕಾರದ ಕೆಲಸ ದೇವರ ಕೆಲಸ' ಎಂಬ ಭಾವನೆ ಅರ್ಥಪೂರ್ಣವಾಗಿ ಅವರ ಅಂತರಂಗಕ್ಕೆ ಇಳಿಯದಿದ್ದರೆ, ಮಾಡುವ ಕಾರ್ಯ ಕಾಲಮಿತಿಯೊಳಗೆ ಮುಗಿಯದಿದ್ದರೆ, ಅಚ್ಚುಕಟ್ಟಾಗಿ ಪೂರ್ಣಗೊಳ್ಳದಿದ್ದರೆ, ಮನ ಸಾರೆ ಮಾಡದಿದ್ದರೆ, ಪ್ರಾಮಾಣಿಕವಾಗಿ ನಿರ್ವಹಿಸದಿದ್ದರೆ, ಕರ್ಮ ಯೋಗವೆಂದು ಸ್ವೀಕರಿಸದಿದ್ದರೆ ಅದು ಕೇವಲ ಕಾಟಾಚಾರ. ಅದು ಭ್ರಷ್ಟಾಚಾರದ ದುಷ್ಟಸಂತಾನವಲ್ಲದೆ ಬೇರೆಯಲ್ಲ. ಈ ಸಂದರ್ಭದಲ್ಲಿ ಬಸವಣ್ಣನವರ ಈ ವಚನವನ್ನು ಮೆಲುಕುಹಾಕಿಕೊಳ್ಳಬಹುದು:

ಮಾಡಿಮಾಡಿ ಕೆಟ್ಟರು ಮನವಿಲ್ಲದೆ, ನೀಡಿನೀಡಿ ಕೆಟ್ಟರು ನಿಜವಿಲ್ಲದೆ
ಮಾಡುವ ನೀಡುವ ನಿಜಗುಣ ಉಳ್ಳಡೆ,
ಕೂಡಿಕೊಂಬ ಕೂಡಲಸಂಗಮದೇವ

(*ಮುಂದುವರಿಯುವುದು*)